# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಲಾಸ

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 316 | Pages. 2 | Date: 12-11-2025, WEDNESDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 316 – ಪುಟಗಳು : 2 | 12-11-2025 ಬುಧವಾರ | Ph: 8762954248 | ದರ : ₹1


## ರಕ್ತದೋಕುಳಿ: ಎಲ್ಲಾ ಆಯಾಮದಿಂದಲೂ ತನಿಖೆಯಾಗಲಿ

### ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಆಗ್ರಹ | ಜಿಲ್ಲಾದ್ಯಂತ ಕಟ್ಟೆಚ್ಚರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೆಹಲಿ ಬಾಂಬ್ ಸ್ಫೋಟ ಪ್ರಕರಣವನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಪಾರದರ್ಶಕ ತನಿಖೆ ಮೂಲಕ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಆಗ್ರಹಿಸಿದರು.

ಚನ್ನರಾಯಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾರು ಸ್ಫೋಟದಲ್ಲಿ ಒಂಬತ್ತು ಜನರು ಮೃತಪಟ್ಟಿದ್ದಾರೆ. ಮೃತರ ಕುಟುಂಬಸ್ಥರಿಗೆ ನೋವು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಗಾಯಾಳುಗಳು ಬೇಗ ಗುಣಮುಖರಾಗಲೆಂದು ಆಶಿಸಿದರು.

ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸೂಕ್ಷ್ಮ ತನಿಖೆ ಮಾಡಿ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡುವುದರ ಜೊತೆಗೆ ನ್ಯಾಯ ಕೊಡುವ ಕೆಲಸವನ್ನುಕೇಂದ್ರ ಸರ್ಕಾರ ಮಾಡಬೇಕು. ಈ ತರಹದ ದುರ್ಘಟನೆಗಳು ನಡೆಯಬಾರದು. ಅವಘಡ ತಡೆಯುವಲ್ಲಿ ಲೋಪವಾಗಿದೆಯೇ ಎಂಬುದರ ಕುರಿತು ತನಿಖೆ ಆಗಬೇಕು. ದುಷ್ಕೃತ್ಯ ಎಸಗಿರುವವರು ಯಾರೇ ಆಗಿದ್ದರೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

**ಜಿಲ್ಲಾದ್ಯಂತ ಹೈ ಅಲರ್ಟ್**

ಐತಿಹಾಸಿಕ ಕೆಂಪು ಕೋಟೆಯ ಮೆಟ್ರೋ ಸ್ಟೇಷನ್ ಬಳಿ ಸೋಮವಾರ ಸಂಭವಿಸಿದ ಪ್ರಬಲ ಕಾರು ಸ್ಫೋಟದಿಂದ ಎಚ್ಚೆತ್ತಿರುವ ಜಿಲ್ಲಾಡಳಿತ ಜನದಟ್ಟಣೆ ಪ್ರದೇಶ, ಪ್ರವಾಸಿ ತಾಣಗಳಲ್ಲಿ ಕಟ್ಟೆಚ್ಚರ ವಹಿಸಿದೆ.



ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಮಂಗಳವಾರ ನಗರದ ರೈಲ್ವೆ ನಿಲ್ದಾಣ, ಹೊಸ ಬಸ್ ನಿಲ್ದಾಣ, ಪಾರ್ಕಿಂಗ್ ಪ್ರದೇಶ, ಸಕಲೇಶಪುರ ಸೇರಿ ವಿವಿಧ ಬಸ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಬಿಗಿ ತಪಾಸಣೆ ನಡೆಸಿದರು. ಶ್ವಾನದಳ ಹಾಗೂ ಮೆಟಲ್ ಡಿಟೆಕ್ಟರ್ ಜೊತೆ ಸೂಕ್ಷ್ಮ ಪರಿಶೀಲನೆ ನಡೆಸಲಾಯಿತು. ರೈಲ್ವೆ ನಿಲ್ದಾಣಕ್ಕೆ ಬರುವ ಪ್ರಯಾಣಿಕರ ಬ್ಯಾಗ್ ಹಾಗು ನಿಲ್ದಾಣ ವ್ಯಾಪ್ತಿಯಲ್ಲಿರುವ ಕಸದ ತೊಟ್ಟಿಗಳ ಶೋಧ ನಡೆಸಿದರು. ಕೇಂದ್ರ ಸರ್ಕಾರದ ಸೂಚನೆ ಹಿನ್ನೆಲೆಯಲ್ಲಿ ಜನನಿಬಿಡ ಪ್ರದೇಶದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ಬೇಲೂರಿನ ಐತಿಹಾಸಿಕ ಚನ್ನಕೇಶವ ದೇವಾಲಯದಲ್ಲಿ ಅಳವಡಿಸಿರುವ ಮೆಟಲ್ ಡಿಟೆಕ್ಟರ್ ನಿಷ್ಕ್ರಿಯವಾಗಿರುವುದು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಪ್ರಮುಖ ದ್ವಾರದಲ್ಲಿರುವ ಸಿಸಿಟಿವಿ ಕ್ಯಾಮರಾ ಸಹ ಕಾರ್ಯ ನಿರ್ವಹಿಸುತ್ತಿಲ್ಲ. ನಿತ್ಯ ದೇವಾಲಯಕ್ಕೆ ನೂರಾರು ಪ್ರವಾಸಿಗರು ಬರುತ್ತಾರೆ. ಎಲ್ಲರ ಮೇಲೆ ನಿಗಾ ಇಡಬೇಕಾದ ಮೆಟಲ್ ಡಿಟೆಕ್ಟರ್ ಯಂತ್ರವೇ ಒಂದೂವರೆ ತಿಂಗಳಿಂದ ಕೆಟ್ಟು ನಿಂತಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಚನ್ನಕೇಶವ ದೇವಾಲಯ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿದ್ದರೂ ಸೂಕ್ತ ಭದ್ರತೆ ಇಲ್ಲದೇ ಇಲ್ಲದಾಗಿದೆ. ದೇವಾಲಯದಲ್ಲಿ ಒಟ್ಟು ಮೂರು ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ಆದರೆ ಮುಖ್ಯ ದ್ವಾರದ ಬಳಿಯ ಸಿಸಿಟಿವಿ ಕೆಲಸ ಮಾಡುತ್ತಿಲ್ಲ. ಭದ್ರತೆ ವಿಚಾರದಲ್ಲಿ ಚನ್ನಕೇಶವಸ್ವಾಮಿ ದೇವಾಲಯ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಶ್ರವಣಬೆಳಗೊಳ ಜೈನಮಠ ಸೇರಿದಂತೆ ವಿವಿಧ ಪ್ರವಾಸಿ ತಾಣಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

**ರೈಲ್ವೆ ನಿಲ್ದಾಣಗಳಲ್ಲಿ ಬಿಗಿ ತಪಾಸಣೆ**

ಹಾಸನ, ಸಕಲೇಶಪುರ, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ ರೈಲ್ವೆ ನಿಲ್ದಾಣಗಳಲ್ಲಿ ಬಿಗಿ ತಪಾಸಣೆ ಕೈಗೊಳ್ಳಲಾಯಿತು. ಸೋಮವಾರ ರಾತ್ರಿಯೇ ಕಾರ್ಯಾಚರಣೆ ಪ್ರಾರಂಭಿಸಿದ ಅಧಿಕಾರಿ ಹಾಗೂ ಸಿಬ್ಬಂದಿ ಪ್ರತಿಯೊಬ್ಬರನ್ನು ತಪಾಸಣೆಗೆ ಒಳಪಡಿಸಿದರು.

## ಅಡಗೂರಿನಲ್ಲಿ ನ. 15ಕ್ಕೆ ಬೃಹತ್ ರಕ್ತದಾನ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಲೂರು ತಾಲ್ಲೂಕಿನ ಅಡಗೂರು ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ ನ. 15ರ ಶನಿವಾರ ಬೃಹತ್ ರಕ್ತದಾನ ಶಿಬಿರ, ಆರೋಗ್ಯ ಉಚಿತ ತಪಾಸಣಾ ಶಿಬಿರ, ನೇತ್ರ ಹಾಗೂ ದೇಹದಾನ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಸವ ಯೋಗ ಕೇಂದ್ರದ ಮುಖ್ಯಸ್ಥ ಚೇತನ್ ಗುರೂಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ರಕ್ತಕ್ಕೆ ಪರ್ಯಾಯ ಮಾರ್ಗಗಳಲ್ಲಿಲ್ಲ. ಯಾವ ವಸ್ತುವನ್ನಾದರೂ ಕೃತಕವಾಗಿ ತಯಾರಿಸಬಹುದು. ಆದರೆ ರಕ್ತ ಉತ್ಪಾದನೆ ಅಸಾಧ್ಯ. ಹಾಗಾಗಿ ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡುವ ಮೂಲಕ ಕೊರತೆ ನೀಗಿಸಬೇಕು. ಅಪಘಾತ, ಹೆರಿಗೆ ಮತ್ತಿತರ ತುರ್ತು ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ನಮ್ಮ ದೇಶದಲ್ಲಿ ಬೇಡಿಕೆಗೆ ತಕ್ಕಂತೆ ರಕ್ತದ ಲಭ್ಯತೆಯಿಲ್ಲ ಎಂದರು.




ಬಸವ ಯೋಗ ಕೇಂದ್ರ ಆರಂಭದಿಂದಲೂ ರಕ್ತದಾನದ ಮಹತ್ವ ಸಾರುತ್ತಾ ಅನೇಕ ಶಿಬಿರಗಳನ್ನು ಆಯೋಜಿಸಿದೆ. ನಾನು ಸಹ ಈ ವರೆಗೆ 99 ಬಾರಿ ರಕ್ತದಾನ ಮಾಡಿದ್ದು ನ. 15ರಂದು 100ನೇ ಬಾರಿಗೆ ರಕ್ತದಾನ ಮಾಡುತ್ತಿದ್ದೇನೆ. ಕನ್ನಡ ರಾಜ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮದಲ್ಲಿ 1 ಸಾವಿರ ಯೂನಿಟ್ ರಕ್ತ ಸಂಗ್ರಹ ಗುರಿ ಹೊಂದಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಧಾರವಾಡದ ಬಸವ ಮಹಾಮನೆಯ ಶ್ರೀ ಬಸವಾನಂದ ಸ್ವಾಮೀಜಿ, ತಿಪಟೂರು ತಾಲ್ಲೂಕು ಕೆರಗೋಡಿ ರಂಗಾಪುರ ಶ್ರೀಮಠದ ಗುರು ಪರದೇಶಿಕೇಂದ್ರ ಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸೇರಿ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ. ಅಂದು ಬೆಳಿಗ್ಗೆ 10 ರಿಂದ ಸಂಜೆ 4.30ರ ವರೆಗೆ ಕಾರ್ಯಕ್ರಮ ಇರಲಿದೆ ಎಂದರು.

ಶಿಬಿರದಲ್ಲಿ ನೇತ್ರ ತಪಾಸಣೆಯನ್ನು ಹಾಸನದ ಅಮ್ಮ ಕಣ್ಣಿನ ಆಸ್ಪತ್ರೆ, ದಂತ ತಪಾಸಣೆಯನ್ನು ವಿ ಕೇರ್ ಸೂಪರ್ ಡೆಂಟಲ್ ಆಸ್ಪತ್ರೆ, ಹೃದಯ ತಪಾಸಣೆಯನ್ನು ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗು ಇಂಡಿಯಾನ ಆಸ್ಪತ್ರೆ, ಕೀಲು ಮತ್ತು ಮೂಳೆ ತಪಾಸಣೆಯನ್ನು ಮಹಾಲಕ್ಷ್ಮೀ ಮಂಜಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಆಯುರ್ವೇದ ಚಿಕಿತ್ಸಾ ತಪಾಸಣೆಯನ್ನು ರಾಜೀವ್ ಆಯುರ್ವೇದ ಆಸ್ಪತ್ರೆಯವರು ಮಾಡಲಿದ್ದಾರೆ ಎಂದರು.

ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಡಾ. ದಿನೇಶ್, ಭುವನೇಶ್, ರಘು ಪಾಳ್ಯ, ಲಕ್ಷ್ಮಣ ಕೀರ್ತಿ ಹಾಜರಿದ್ದರು.

## ಸಾರ್ವಜನಿಕ ಸಮಸ್ಯೆಗೆ ಅಧಿಕಾರಿಗಳು ಸ್ಪಂದಿಸಿ: ಸಚಿವ ಕೃಷ್ಣಬೈರೇಗೌಡ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಾರ್ವಜನಿಕರು ಸಲ್ಲಿಸುವ ಅರ್ಜಿಗಳನ್ನು ಕಾನೂನು ಚೌಕಟ್ಟಿನಲ್ಲಿ ನಿಗದಿತ ಸಮಯದಲ್ಲಿ ವಿಲೇವಾರಿ ಮಾಡುವ ಮೂಲಕ ಜನರ ಸಮಸ್ಯೆಗೆ ಸ್ಪಂದಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ನಿರ್ದೇಶನ ನೀಡಿದರು.

ಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಜನಸ್ಪಂದನ ಹಾಗೂ ಸಾರ್ವಜನಿಕ ಅಹವಾಲು ಸ್ವೀಕಾರ ಸಭೆಯಲ್ಲಿ ಮಾತನಾಡಿ, ಎಲ್ಲಾ ಅರ್ಜಿಗಳಿಗೂ ಒಂದೇ ರೂಪದಲ್ಲಿ ಪರಿಹಾರ ನೀಡಲು ಸಾಧ್ಯವಿಲ್ಲ. ಬೋರ್‌ವೆಲ್‌ಗೆ ಸಂಬಂಧಿಸಿದ ಸಮಸ್ಯೆಗೆ ಶಾಸಕರ ವ್ಯಾಪ್ತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು. ಮನೆ ಮಂಜೂರು ಗ್ರಾಮ ಪಂಚಾಯಿತಿ ಸಮಿತಿ ಬರುತ್ತದೆ. ಸ್ವೀಕೃತವಾದ ಇಂತಹ ಅರ್ಜಿಗಳನ್ನು ಸಂಬಂಧಿಸಿದವರಿಗೆ ಕಳುಹಿಸಲಾಗುವುದು ಎಂ ದು ತಿಳಿಸಿದರು.

ಸ್ವೀಕಾರವಾದ ಅರ್ಜಿಗಳಲ್ಲಿ ಸಾಧ್ಯವಿರುವ ಕೆಲವು ಅರ್ಜಿಗಳಿಗೆ ಸ್ಥಳದಲ್ಲಿ ಪರಿಹಾರ ಒದಗಿಸಲಾಗುತ್ತದೆ. ಉಳಿದವುಗಳ ವಿಲೇವಾರಿಗೆ ಹೆಚ್ಚಿನ ಆದ್ಯತೆ ನೀಡಿ ಪರಿಹಾರ ಒದಗಿಸಬೇಕೆಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.



ಹೆಚ್ಚು ಅರ್ಜಿಗಳು ದುರಸ್ತಿಗೆ ಸಂಬಂಧಿಸಿದಂತೆ ಬರುತ್ತವೆ. ಕಳೆದ ಐದು ವರ್ಷಗಳಲ್ಲಿ ಕೇವಲ 500 ಪ್ರಕರಣ ದುರಸ್ತಿ ಮಾಡಲಾಗಿದೆ. 2025ರಲ್ಲಿ 25000 ಪ್ರಕರಣ ದುರಸ್ತಿಗೆ ಕ್ರಮವಹಿಸಿದ್ದು, ಈಗಾಗಲೇ 13 ರಿಂದ 14 ಸಾವಿರ ಅರ್ಜಿ ವಿಲೇವಾರಿ ಮಾಡಲಾಗಿದೆ. ನಕಾಶೆಯಲ್ಲಿ ರಸ್ತೆ ಇದ್ದರೆ ಮುಲಾಜಿಲ್ಲದೆ ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ದುರಸ್ತಿಯಾದ ನಂತರ ಇಂಡೀಕರಣ ಆಗಬೇಕು. ಅದರ ಬಗ್ಗೆ ಅರ್ಜಿಗಳು ಬರುತ್ತಿವೆ. ಅವುಗಳ ಬಗ್ಗೆ ಹೆಚ್ಚಿನ ಗಮನಹರಿಸಿ ಪಟ್ಟಿ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

**786 ಅರ್ಜಿ ಸ್ವೀಕಾರ**

ಸಾರ್ವಜನಿಕರು ಖುದ್ದು ಹಾಜರಾಗಿ ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿಕೊಂಡು ಟೋಕನ್ ನಂಬರ್ ಸ್ವೀಕರಿಸಿ ತಮ್ಮ ಅಹವಾಲನ್ನು ಸಲ್ಲಿಸಿದರು ಒಟ್ಟು 786 ಅರ್ಜಿಗಳನ್ನು ಸ್ವೀಕರಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಉಪ ವಿಭಾಗಾಧಿಕಾರಿಗಳಾದ ಜಗದೀಶ್ ಗಂಗಣ್ಣನವರ್, ರಾಜೇಶ್ ಹಾಗೂ ಇತರರಿದ್ದರು.

## ಒನಕೆ ಓಬವ್ವ ಹೆಣ್ಣು ಮಕ್ಕಳ ಸಬಲೀಕರಣದ ಪ್ರತೀಕ

### ಎಲ್ಲರ ಮನಸ್ಸಲ್ಲೂ ಅವರ ಹೆಸರು ಚಿರಸ್ಥಾಯಿ | ಜಿಲ್ಲಾಧಿಕಾರಿ ಲತಾಕುಮಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಒನಕೆ ಓಬವ್ವ ಹೆಣ್ಣು ಮಕ್ಕಳ ಸಬಲೀಕರಣದ ಪ್ರತೀಕ, ಅವರ ಹೆಸರು ಕಲ್ಲಿನಲ್ಲಿ ಕೆತ್ತದಿದ್ದರೂ ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ವೀರವನಿತೆ ಒನಕೆ ಓಬವ್ವ ಜಯಂತಿಯಲ್ಲಿ ಮಾತನಾಡಿ, ಸಾಮಾನ್ಯ ಮಹಿಳೆ ಶತ್ರುಗಳನ್ನು ಸಂಹರಿಸಿ ಹೊಸ ನಾಂದಿಯನ್ನು ಹಾಡುವ ಮೂಲಕ ಸ್ತ್ರೀ ಯರಲ್ಲಿ ಒನಕೆ ಓಬವ್ವ ಇದ್ದಾರೆ. ಇಂದಿನ ಯುಗದಲ್ಲಿ ಒನಕೆಯ ಬದಲಾಗಿ ಶಿಕ್ಷಣವನ್ನು ಪಡೆಯುವ ಮೂಲಕ ಪೆನ್ನನ್ನು ಹಿಡಿಯಬೇಕು ಎಂದರು.

ಒನಕೆ ಓಬವ್ವ ಜಯಂತಿ ಆಚರಣೆಗೆ ಮಾತ್ರ ಸೀಮಿತವಾಗದೆ, ಪ್ರತಿಯೊಂದು ಹೆಣ್ಣು ಮಕ್ಕಳ ಹೊಸ ಹುಟ್ಟಿದ ದಿನವನ್ನಾಗಿ ಆಚರಿಸುವ ದಿನವಾಗಿದೆ ಎಂದು ತಿಳಿಸಿದರು. ಮಹಿಳೆ ಸಬಲೆ, ಶಕ್ತಿವಂತೆ ಹಾಗೂ ಧೈರ್ಯವಂತಳಾಗಿ ನಾಯಕತ್ವದ ಗುಣ ಹೊಂದಬೇಕು ಎಂದು ತಿಳಿಸಿದರು.

ಸಮಾಜದಲ್ಲಿ ಮಹಿಳೆಗೆ ಸವಾಲುಗಳು ಜಾಸ್ತಿ, ಅದಕ್ಕೆ ಹೆದರದೇ, ಏನೇ ನಿಂದನೆ ಮಾಡಿದರು ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು, ನೋವನ್ನು ಅನುಭವಿಸುವುದು, ನರಳಾಡುವುದು ಬಿಟ್ಟು, ತಮ್ಮನ್ನು ತಾವು ಸಬಲೀಕರಣ ಮಾಡಿಕೊಳ್ಳಲು ಹೋರಾಟ ಮಾಡಬೇಕು ಎಂದು ತಿಳಿಸಿದರು.

ಪ್ರತಿಯೊಬ್ಬರೂ ಜೀವನದ ಪ್ರತಿ ಹೆಜ್ಜೆಯಲ್ಲಿಯೂ ಅವರ ಧೈರ್ಯ ಸಾಹಸ, ಸಮಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು ಆಗ ಮಾತ್ರ ಸಮಾಜದಲ್ಲಿ ಹೆಣ್ಣು ಸಬಲೇಯಾಗುತ್ತಾಳೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.




ಅಪರ ಜಿಲ್ಲಾಧಿಕಾರಿ ಮಂಜುನಾಥ್ ಮಾತನಾಡಿ, ಇಂದಿನ ಪೀಳಿಗೆಗೆ ಬೂಸ್ಟರ್ ಅವಶ್ಯಕತೆ ಇದೆ. ಅದಕ್ಕೆ ಸಾಧನೆ ಮಾಡಿರುವ ಇಂತಹ ಮಹನೀಯರ ವಿಚಾರಧಾರೆಗಳನ್ನು ತಿಳಿದುಕೊಂಡಾಗ ನಮ್ಮ ಜೀವನದಲ್ಲಿ ಏನಾದರೂ ಒಂದು ಸಾಧನೆಯನ್ನು ಮಾಡಲು ಆತ್ಮವಿಶ್ವಾಸ ಮೂಡುತ್ತದೆ ಎಂದರು.

ಅಂದಿನ ಕಾಲದಲ್ಲಿ ಅವರಿಗೆ ಒನಕೆ ಇತ್ತು ಆದರೆ ಇಂದು ನಮ್ಮ ಕೈಯಲ್ಲಿ ಒನಕೆಯ ಸಂಕೇತವಾಗಿ ಪೆನ್ನು ಇದೆ. ಜೊತೆಗೆ ಸಾಧನೆ ಮಾಡಲು ಮುಕ್ತವಾದ ಅವಕಾಶವಿದೆ ಹೀಗಾಗಿ ಎಲ್ಲರೂ ಸಾಧನೆ ಮಾಡುವ ಮೂಲಕ ದೇಶದ ಆಶಾಕಿರಣವಾಗಿ ಬೆಳಗಿ ನಿಮ್ಮ ತಂದೆ ತಾಯಿಗೆ ಕೀರ್ತಿ ತನ್ನಿ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ ಮಾತನಾಡಿ, ಹೈದರಾಲಿಯು ಚಿತ್ರದುರ್ಗ ಕೋಟೆಯ ಮೇಲೆ ದಾಳಿ ಮಾಡಲು ಬಂದಾಗ ಒನಕೆ ಓಬವ್ವ ತನ್ನ ಸಮಯ ಪ್ರಜ್ಞೆಯಿಂದ ಕೋಟೆಯನ್ನು ಉಳಿಸಿಕೊಂಡಳು. ಅದೇ ರೀತಿಯಾಗಿ ಓಬವ್ವನವರ ಸಾಧನೆಯನ್ನು ತಿಳಿದುಕೊಂಡು ಇಂದು ವಿದ್ಯಾರ್ಥಿಗಳು ಸಾಂಸ್ಕೃತಿಕ, ಶೈಕ್ಷಣಿಕವಾಗಿ ತಮ್ಮ ಶಕ್ತಿಯನ್ನು ಓದಿನಲ್ಲಿ ತೋರಿಸಿ ಇತಿಹಾಸ ಸೃಷ್ಟಿ ಮಾಡಬೇಕು ಎಂದರು.

ಕಲಬುರಗಿಯ ಬರಹಗಾರ ಡಾ.ವಿಠ್ಠಲ ವಗ್ಗನ್ ಮಾತನಾಡಿ, ಹೆಣ್ಣು ಅಬಲೆ ಅಲ್ಲ ಅವಕಾಶ ಸಿಕ್ಕರೆ ಎಂತಹ ಸಾಧನೆಯನ್ನಾದರೂ ಮಾಡಬಲ್ಲಳು ಎಂಬುದಕ್ಕೆ ಒನಕೆ ಓಬವ್ವ ಸೂಕ್ತ ಉದಾಹರಣೆಯಾಗಿದ್ದಾರೆ ಎಂದು ತಿಳಿಸಿದರು.

ಹೆಣ್ಣು ತ್ಯಾಗದ ಜೊತೆಗೆ ಸಮಾಜವನ್ನು ತಿದ್ದಲು ಸಿದ್ಧ ಎಂದು ತಿಳಿಸಿದರಲ್ಲದೆ, ಪ್ರಸ್ತುತ ರಾಜಕೀಯವಾಗಿ ಆಡಳಿತ ಮಾಡುವುದರಲ್ಲಿಯೂ ಮಹಿಳೆಯರಿದ್ದಾರೆ ಹಾಗೂ ನಮ್ಮ ಜಾನಪದ ಸಾಹಿತ್ಯದಲ್ಲೂ ಹಾಡುಗಳ ಮೂಲಕ ಮಹಿಳೆಯರನ್ನು ಹೊಗಳಿರುವ ಕುರಿತು ನೋಡಬಹುದು ಎಂದರು.

ಯುದ್ಧ ಕಲೆ ಗೊತ್ತಿಲ್ಲದಿದ್ದರೂ ನಾಡಿನ ಸಂರಕ್ಷಣೆಗಾಗಿ ಒನಕೆ ಹಿಡಿದು ವೈರಿ ಸೈನಿಕರನ್ನು ಸದೆಬಡಿದ ಛಲವಾದಿ ಹೆಣ್ಣು ಮಗಳು ಓಬವ್ವ. ಒಂದು ಮನೆಯಲ್ಲಿ ಒಂದು ಹೆಣ್ಣು ಶಿಕ್ಷಿತಳಾದರೆ ಒಂದು ಕುಟುಂಬವೇ ಶಿಕ್ಷಿತವಾದಂತೆ. ಪ್ರತಿಯೊಂದು ಹೆಣ್ಣು ಮಕ್ಕಳಲ್ಲಿಯೂ ರೋಗನಿರೋಧಕ ಶಕ್ತಿ, ತಾಳ್ಮೆ, ಧೈರ್ಯ ಎಂಬುದು ಪುರುಷನ ಹತ್ತು ಪಟ್ಟು ಹೆಚ್ಚಿರುತ್ತದೆ ಎಂದು ತಿಳಿಸಿದರು.

ಭಾರತ ಸಂವಿಧಾನ ಯಾವಾಗ ಜಾರಿಗೆ ಬಂತು ಅಂದಿನಿಂದ ಈ ದೇಶದಲ್ಲಿ ಶಾಸನಬದ್ಧ, ಆಡಳಿತಾತ್ಮಕ ಹಾಗೂ ನ್ಯಾಯ ಸಮ್ಮತವಾಗಿರುವಂತಹ ವೀರ ವನಿತೆಯರು ಹುಟ್ಟಿದ್ದಾರೆ ಎಂದರಲ್ಲದೆ, ವೀರ ವನಿತೆ ಒನಕೆ ಓಬವ್ವನ ಜೀವನದ ಕುರಿತಾಗಿ ಸವಿವರವಾಗಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಗೀತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಹೆಚ್.ಪಿ. ತಾರಾನಾಥ್, ಸಮುದಾಯದ ಮುಖಂಡರು, ಮತ್ತಿತರರು ಉಪಸ್ಥಿತರಿದ್ದರು.

## ಕಾರು-ಬೈಕ್ ಡಿಕ್ಕಿ: ಬೈಕ್ ಸವಾರ ಸ್ಥಳದಲ್ಲೇ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಲೂರುಹಾಸನ ರಸ್ತೆಯ ಹೂವಿನಹಳ್ಳಿ ಕಾವಲು ಸಮೀಪ ಕಾರು ಬೈಕ್‌ಗೆ ಡಿಕ್ಕಿಯಾದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಸೋಮವಾರ ನಡೆದಿದೆ.

ಚನ್ನಪಟ್ಟಣದ ದೇವಮ್ಮ ಬಡಾವಣೆಯ ರವಿಕುಮಾರ್ ಮೃತರು. ನಗರದ ಕ್ವಾಲಿಟಿ ಬಾರ್‌ನಲ್ಲಿ ಕಿಚನ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಅವರು ಸ್ನೇಹಿತ ಧರ್ಮರಾಜ್ ಜೊತೆ ನ. 10ರಂದು ಮಧ್ಯಾಹ್ನ ಬೇಲೂರಿಗೆ ತೆರಳಿ ಸಂಜೆ 7 ಗಂಟೆ ವೇಳೆಗೆ ಪಲ್ಸರ್ ಬೈಕ್‌ನಲ್ಲಿ ಹಾಸನ ಕಡೆಗೆ ಬರುತ್ತಿದ್ದಾಗ ಕಾರಿನ ಚಾಲಕ ನಿರ್ಲಕ್ಷ್ಯದಿಂದ ಚಾಲನೆ ಮಾಡಿಕೊಂಡು ಬಂದು ಬೈಕ್‌ಗೆ ಡಿಕ್ಕಿ ಮಾಡಿದ್ದಾನೆ.

ಡಿಕ್ಕಿಯ ಪರಿಣಾಮ ಇಬ್ಬರೂ ರಸ್ತೆ ಮೇಲೆ ಬಿದ್ದಿದ್ದು, ರವಿಕುಮಾರ್ ತಲೆಗೆ ತೀವ್ರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಧರ್ಮರಾಜ್ ಅವರಿಗೆ ಮುಖ ಮತ್ತು ತಲೆಗೆ ಗಾಯಗಳಾಗಿದ್ದು, ಪರಿಚಿತರಾದ ದೇವರಾಜ್ ಅವರು ಹಿಮ್ಸ್‌ಗೆ ದಾಖಲಿಸಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮದ್ಯಪಾನಕ್ಕೆ ಅವಕಾಶ: ಒಬ್ಬನ ಬಂಧನ

ಅರೇಹಳ್ಳಿ: ಈದ್ಗಾ ಮೈದಾನದ ಹತ್ತಿರ ಸಾರ್ವಜನಿಕರಿಗೆ ಮದ್ಯಪಾನ ಮಾಡಲು ಅವಕಾಶ ಮಾಡಿಕೊಡುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಸಂತೋಷ ನಗರ ನಿವಾಸಿ ಸುನೀಲ್ ಬಂಧಿತ ಆರೋಪಿ. ಸಾರ್ವಜನಿಕರು ಓಡಾಡುವ ಜಾಗದಲ್ಲಿ ಮದ್ಯಪಾನ ಮಾಡಲು ಅವಕಾಶ ಮಾಡಿಕೊಟ್ಟಿದ್ದನೆಂಬ ಆರೋಪದ ಹಿನ್ನೆಲೆಯಲ್ಲಿ ಪೊಲೀಸರು ದಾಳಿ ನಡೆಸಿದರು. ಅಪಾರ ಪ್ರಮಾಣದ ಮದ್ಯವನ್ನು ಅಮಾನತು ಮಾಡಲಾಗಿದೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತೃತೀಯ ಲಿಂಗಿಗಳಿಗೆ ರಕ್ಷಣೆ ಕೊಡುವಂತೆ ಸರ್ಕಾರಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯದಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಮೇಲೆ ಹಲ್ಲೆ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು ಸರ್ಕಾರ ಸೂಕ್ತ ರಕ್ಷಣೆ ನೀಡಬೇಕು ಎಂದು ಲಿಂಗತ್ವ ಮತ್ತು ಲೈಂಗಿಕ ಬಹುತಕ್ವಕ್ಕಾಗಿ ಚಳವಳಿಯ ವೈಶಾಲಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಬೆಂಗಳೂರಿನ ಬೊಮ್ಮನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅ. 30 ಹಾಗೂ 31ರಂದು ತೃತೀಯ ಲಿಂಗಿ ಸುಕನ್ಯ ಮೇಲೆ ಹಲ್ಲೆ ನಡೆಸಿ ಅಮಾನವೀಯವಾಗಿ ವರ್ತಿಸಿರುವ ಕಿಡಿಗೇಡಿಗಳನ್ನು ಬಂಧಿಸಿ ಕ್ರಮ ಜರುಗಿಸಬೇಕು. ಅ. 30ರಂದು ಬೆಂಗಳೂರಿನ ಕೃಷ್ಣರಾಜಪುರಂನಿಂದ ಸುಕನ್ಯಳನ್ನು ಅಪಹರಿಸಿದ್ದ ಕಿಡಿಗೇಡಿಗಳು ಅಜ್ಞಾತ ಸ್ಥಳಕ್ಕೆ ಕರೆದೊಯ್ದು ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಅವರ ತಲೆ ಬೋಳಿಸಿ ಅಮಾನವೀಯವಾಗಿ ವರ್ತಿಸಿದ್ದಾರೆ. ಲೈಂಗಿಕ ಅಲ್ಪಸಂಖ್ಯಾತರು ಮೊದಲೇ ಭಯದಲ್ಲಿ ಬದುಕುತ್ತಿದ್ದಾರೆ. ಕುಟುಂಬ, ಸಮಾಜದಿಂದ ದೂಷಣೆಗೆ ಒಳಪಟ್ಟಿರುವ ತೃತೀಯ ಲಿಂಗಿಗಳಿಗೆ ರಕ್ಷಣೆಯೇ ಇಲ್ಲವಾಗಿದೆ ಎಂದರು.




ರಾಜ್ಯ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಸುಕನ್ಯ ಮೇಲೆ ಹಲ್ಲೆ ನಡೆಸಿರುವವರನ್ನು ಕಾನೂನು ಶಿಕ್ಷೆಗೆ ಗುರಿಪಡಿಸಬೇಕು. ರಾಜ್ಯದ ಪೊಲೀಸರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಲೈಂಗಿಕ ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಕೆಲಸ ಮಾಡುವ ಸಂಘ ಸಂಸ್ಥೆಗಳ ಜೊತೆಗೂಡಿ ಅನ್ಯಾಯ ತಡೆಗೆ ಸಹಕರಿಸಬೇಕೆಂದು ಒತ್ತಾಯಿಸಿದರು. ಲೈಂಗಿಕ ಅಲ್ಪಸಂಖ್ಯಾತರಿಗೆ ಸರ್ಕಾರಿ ಉದ್ಯೋಗದಲ್ಲಿ ವಿಶೇಷ ನೇಮಕಾತಿ, ಉದ್ಯಮಶೀಲತೆ ಯೋಜನೆ, ಕೌಶಲಾಭಿವೃದ್ಧಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳವಳಿಯ ವಿನ್ಸೆಂಟ್, ಮಹೇಶ್, ಬಿ.ಆರ್.ಶಿವಣ್ಣ ಇದ್ದರು.

## ಸಿಐಟಿಯು ರಾಜ್ಯ ಸಮ್ಮೇಳನಕ್ಕೆ ಸಕಲ ಸಿದ್ಧತೆ: ಧರ್ಮೇಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಿಐಟಿಯು 16ನೇ ರಾಜ್ಯ ಸಮ್ಮೇಳನ ನ. 13 ರಿಂದ 15ರ ವರೆಗೆ ನಡೆಯಲಿದೆ. ಸಮಾವೇಶಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ನ. 13ರ ಬೆಳಿಗ್ಗೆ 11 ಗಂಟೆಗೆ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಕೆ. ಹೇಮಲತಾ ಉದ್ಘಾಟನೆ ನೆರವೇರಿಸುವರು. ರಾಷ್ಟ್ರೀಯ ಕಾರ್ಯದರ್ಶಿ ಕೆ.ಎನ್.ಉಮೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಭಾಗವಹಿಸುವರು. ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ದೇಶ, ರಾಜ್ಯ ಹಾಗೂ ಜಿಲ್ಲೆಯ ಅಭಿವೃದ್ಧಿ ಕುರಿತು ಸಂಪನ್ಮೂಲ ವ್ಯಕ್ತಿಗಳು ಚರ್ಚೆ ನಡೆಸಲಿದ್ದಾರೆ. ಕಾರ್ಮಿಕರಿಗೆ ಆಗುತ್ತಿರುವ ತೊಂದರೆ ಹಾಗು ಪರಿಹಾರ ಕ್ರಮಗಳ ಕುರಿತು ವರದಿಯೊಂದನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವ ಯೋಜನೆ ಇದೆ. ನ. 15ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಹೇಮಾವತಿ ಪ್ರತಿಮೆಯಿಂದ ನಗರದ ವಿವಿಧ ರಸ್ತೆಗಳಲ್ಲಿ ಆಕರ್ಷಕ ಪಥ ಸಂಚಲನ, ಧ್ವಜಾರೋಹಣ ಹಾಗೂ ಹುತಾತ್ಮರ ಸ್ತಂಭಕ್ಕೆ ನಮನ ಸಲ್ಲಿಸಲಾಗುವುದು ಎಂದು ತಿಳಿಸಿದರು.




ಜಿಲ್ಲಾಧಿಕಾರಿ ಕಚೇರಿ ನಿವಾಸದ ಪಕ್ಕ ಬಹಿರಂಗ ಸಭೆ ಹಮ್ಮಿಕೊಳ್ಳಲಾಗಿದೆ. ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಕೆ.ಹೇಮಲತಾ ಸಭೆಗೆ ಚಾಲನೆ ನೀಡುವರು. ಮುಖಂಡರಾದ ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಎಂ.ಬಿ.ಪುಷ್ಪ ಅವರು ಮಾತನಾಡಲಿದ್ದಾರೆ ಎಂದರು.

ಸಮ್ಮೇಳನ ಸ್ವಾಗತ ಸಮಿತಿ ಗೌರವಾಧ್ಯಕ್ಷ ಹೆಚ್.ಎನ್.ಪರಮಶಿವಯ್ಯ, ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ರಾಜು ಗೊರೂರು, ಅರವಿಂದ, ಹೆಚ್.ಆರ್.ನವೀನ್‌ಕುಮಾರ್ ಹಾಜರಿದ್ದರು.

# ಮಕ್ಕಳ ಯೋಗಕ್ಷೇಮಕ್ಕಾಗಿ ಕ್ರಿಯಾ ಯೋಜನೆ ತಯಾರಿಸಿ: ಡಿಸಿ

## ರ್‍ಯಾಗಿಂಗ್‌ಗೆ ಅವಕಾಶ ಮಾಡಿಕೊಡಬೇಡಿ | ಸಹಾಯವಾಣಿ ಮಾಹಿತಿ ಹೆಚ್ಚಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಸುರಕ್ಷತೆ, ದೈಹಿಕ ಮತ್ತು ಮಾನಸಿಕ ಯೋಗ ಕ್ಷೇಮಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಸಮಗ್ರ ಕ್ರಿಯಾ ಯೋಜನೆ ತಯಾರಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿ, ಮಕ್ಕಳ ಮಾನಸಿಕ ಸ್ವಾಸ್ಥ್ಯ ಕಾಪಾಡಲು ಶಿಕ್ಷಕರು, ಪೋಷಕರು, ಸ್ವ ಸಹಾಯ ಸಂಘ ಸಂಸ್ಥೆಗಳು ಪರಸ್ಪರ ಕೈಜೋಡಿಸಬೇಕು. ರಾಷ್ಟ್ರೀಯ ಮಾನಸಿಕ ಆರೋಗ್ಯ ಸಹಾಯವಾಣಿ ಸಂಖ್ಯೆ 14416 ಪ್ರತಿಯೊಂದು ಶಾಲಾ ಕಾಲೇಜು, ವಸತಿ ನಿಲಯ, ಕೋಚಿಂಗ್ ಸೆಂಟರ್‌ಗಳಲ್ಲಿಯೂ ಕಡ್ಡಾಯವಾಗಿ ಫಲಕಗಳಲ್ಲಿ ಅಳವಡಿಸುವಂತೆ ಸೂಚನೆ ನೀಡಿದರು.

ಸಮಸ್ಯೆಗಳನ್ನು ಗಮನಿಸಿದಾಗ ಸಾರ್ವಜನಿಕರು ಮಾಹಿತಿ ಒದಗಿಸಲು ಸಹಕಾರಿಯಾಗುವಂತೆ ಈ ಸಂಖ್ಯೆಯ ಕುರಿತು ಹೆಚ್ಚಿನ ಪ್ರಚಾರ ನೀಡುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಗಳ ವೆಬ್‌ಸೈಟ್, ಸಾಮಾಜಿಕ ಜಾಲತಾಣಗಳಲ್ಲಿ, ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯಿತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆವರಣದಲ್ಲಿರುವ ಬೋರ್ಡ್‌ನಲ್ಲಿಯೂ ಸಹಾಯವಾಣಿ ಸಂಖ್ಯೆ 14416 ಅನ್ನು ಪ್ರಕಟಿಸುವಂತೆ ತಿಳಿಸಿದರು.



ಖಾಸಗಿ ಆಸ್ಪತ್ರೆ, ಸ್ಕೌಟ್ಸ್ ಅಂಡ್ ಗೈಡ್ಸ್, ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಹಾಗೂ ಮತ್ತಿತರ ಸಂಘ ಸಂಸ್ಥೆಗಳನ್ನು ಬಳಸಿಕೊಂಡು ಕ್ರಿಯಾತ್ಮಕವಾಗಿ ಜಾಗೃತಿ ಮೂಡಿಸಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮಕ್ಕಳಿಗೆ ಪರೀಕ್ಷಾ ಭಯ ನಿವಾರಣೆ ಮಾಡುವುದರ ಜೊತೆಗೆ ಪರೀಕ್ಷಾ ಸಿದ್ಧತೆ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಒದಗಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿ, ರಾಷ್ಟ್ರೀಯ ಆತ್ಮಹತ್ಯೆ ತಡೆ ಬಗ್ಗೆಯೂ ಸಂಪನ್ಮೂಲ ವ್ಯಕ್ತಿಗಳಿಂದ ಸೆಮಿನಾರ್ ಆಯೋಜಿಸುವ ಮೂಲಕ ಅರಿವು ಮೂಡಿಸಲು ನಿರ್ದೇಶನ ನೀಡಿದರು.

ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರುವ ಶಾಲಾ ಕಾಲೇಜುಗಳಲ್ಲಿ ಸಮಾಲೋಚಕರನ್ನು ನೇಮಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ತಾಲ್ಲೂಕುವಾರು ಪಟ್ಟಿಯನ್ನು ಪಡೆಯುವಂತೆ ಸೂಚಿಸಿದರಲ್ಲದೆ, ಎಲ್ಲಾ ಮಕ್ಕಳ ಮಾನಸಿಕ ಆರೋಗ್ಯ ತಪಾಸಣೆ ನಡೆಸಲು ಕ್ರಮ ವಹಿಸುವುದರ ಜೊತೆಗೆ ಸಮಸ್ಯೆ ಕಂಡುಬಂದ ಮಕ್ಕಳಿಗೆ ಸಮರ್ಪಕವಾಗಿ ಆಪ್ತ ಸಮಾಲೋಚನೆ ನಡೆಸುವ ಮೂಲಕ ಮಕ್ಕಳ ಸಮಸ್ಯೆ ನಿವಾರಣೆಗೆ ಹೆಚ್ಚು ಒತ್ತು ನೀಡುವಂತೆ ತಿಳಿಸಿದರು.

ಎಲ್ಲಾ ಶೈಕ್ಷಣಿಕ ಸಂಸ್ಥೆಗಳ ಬೋಧಕ, ಬೋಧಕೇತರ ಆಡಳಿತ ಮಂಡಳಿಯವರಿಗೂ ಸಹ ಮಾನಸಿಕ ಆರೋಗ್ಯ ಕುರಿತು ಸಂವಹನ ತರಬೇತಿ ನೀಡಬೇಕು. ಶಾಲಾ-ಕಾಲೇಜುಗಳಲ್ಲಿ ರ್‍ಯಾಗಿಂಗ್‌ನಿಂದ ಮಕ್ಕಳು ಮಾನಸಿಕವಾಗಿ ಕುಗ್ಗುತ್ತಾರೆ. ರ್‍ಯಾಗಿಂಗ್ ತಡೆಗಟ್ಟುವ ನಿಟ್ಟಿನಲ್ಲಿ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಕರು, ಹಾಸ್ಟೆಲ್ ವಾರ್ಡನ್‌ಗಳಿಗೆ ಜವಾಬ್ದಾರಿ ನಿಗದಿಪಡಿಸಿ ಸುತ್ತೋಲೆ ಹೊರಡಿಸುವಂತೆ ತಿಳಿಸಿದರಲ್ಲದೆ, ಲೈಂಗಿಕ ದೌರ್ಜನ್ಯ, ಕಿರುಕುಳ ತಡೆಯಲು ಹೇಗೆ ಪ್ರತಿಸ್ಪಂದಿಸಬೇಕು ಎಂದು ಮಕ್ಕಳಿಗೆ ಅರಿವು ಮೂಡಿಸಬೇಕು ಎಂದರು.

ಮಗುವಿನ ಮಾನಸಿಕ ಸ್ಥಿತಿ ಅರ್ಥಮಾಡಿಕೊಂಡು ಸರಿತಪ್ಪುಗಳನ್ನುತಿದ್ದಿ ತೀಡುವ ಜವಬ್ದಾರಿ ಶಿಕ್ಷಕರ ಮೇಲಿದ್ದು, ಈ ನಿಟ್ಟಿನಲ್ಲಿ ಸಮನ್ವಯ ಅಧಿಕಾರಿ ನೇಮಿಸಬೇಕು. ಶಾಲಾ ಕಾಲೇಜುಗಳ ಆವರಣದಿಂದ ನಿಗದಿತ ದೂರದೊಳಗೆ ಮಾದಕ ವಸ್ತುಗಳ ಮಾರಾಟ ನಿಷೇಧಿಸಲಾಗಿದ್ದು, ಇದರ ಬಗ್ಗೆ ಹೆಚ್ಚಿನ ಗಮನಹರಿಸಿ ಮಾದಕ ವಸ್ತುಗಳ ಸೇವನೆಯನ್ನು ತಡೆಯುವ ನಿಟ್ಟಿನಲ್ಲಿಯೂ ನಿಗಾವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮಕ್ಕಳು ಮಾನಸಿಕ ಒತ್ತಡ ಹೊರಹಾಕಲು ಪಠ್ಯೇತರ ಚಟುವಟಿಕೆಗಳಿಗೆ ಆಧ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಕಡ್ಡಾಯವಾಗಿ ಒಂದು ಮಗು ಒಂದು ಕ್ರೀಡೆ ಕಲಿಯಲೇಬೇಕು. ಶಾಲೆಗಳಲ್ಲಿ ಕ್ರೀಡಾ ಚಟುವಟಿಕೆಗಳಿಗೆ ವಾರಕ್ಕೆ ಎಷ್ಟು ಸಮಯ ನೀಡುತ್ತಿದ್ದಾರೆ ಎಂಬುದನ್ನು ಪರಿಶೀಲಿಸುವಂತೆ ತಿಳಿಸಿದರಲ್ಲದೆ, ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೋಷಕರ ಪಾಲಕರ ಪಾತ್ರ ತುಂಬ ಇರುತ್ತದೆ ಎಂದರು.

ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಶೈಕ್ಷಣಿಕ ಸಂಸ್ಥೆ, ವಸತಿ ನಿಲಯಗಳಲ್ಲಿ ಟ್ಯಾಂಪರ್ ಪ್ರೂಫ್, ಬಾಲ್ಕನಿಯ ಪ್ಯಾರಫಿಟ್ ಎತ್ತರಿಸುವುದು, ಹೈಟೆನ್ಷನ್ ವೈಯರ್, ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬ ಕೈಗೆಟಕುವ ರೀತಿಯಲ್ಲಿರದಂತೆ ಎಚ್ಚರವಹಿಸಿ ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಕೋಚಿಂಗ್ ಸೆಂಟರ್‌ಗಲ್ಲಿ ಮಕ್ಕಳ ಮಾನಸಿಕ ಆರೋಗ್ಯಕ್ಕಾಗಿ ಏನೇನು ಕ್ರಮ ಕೈಗೊಂಡಿದ್ದಾರೆ ಎಂಬುದರ ಬಗ್ಗೆ ವರದಿ ಪಡೆಯುವಂತೆ ನಿರ್ದೇಶನ ನೀಡಿದರಲ್ಲದೆ, ನೋಡಲ್ ಅಧಿಕಾರಿಯನ್ನು ನೇಮಿಸಿ ಅನುಪಾಲನ ವರದಿ ನೀಡುವಂತೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಚಂದ್ರಮೌಳಿ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಲರಾಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಕುಮಾರ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಗಂಗಾಧರ್ ಮತ್ತಿತರರಿದ್ದರು.

# ವಿಶ್ವಮಾನವ ಪರಿಕಲ್ಪನೆಯ ಸ್ಕೌಟ್ಸ್-ಗೈಡ್ಸ್



ಆಲೂರು: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮಕ್ಕಳನ್ನು ಸಂಕುಚಿತಗೊಳಿಸದೆ ವಿಶ್ವಮಾನವರನ್ನಾಗಿ ಮಾಡುತ್ತದೆ ಎಂದು ಸಂಸ್ಥೆಯ ಉಪಾಧ್ಯಕ್ಷೆ ಸಿ.ಎಸ್. ಪೂರ್ಣಿಮಾ ತಿಳಿಸಿದರು.

ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ಸಂಸ್ಥಾಪನೆ ಹಾಗೂ ಧ್ವಜ ಚೀಟಿ ಬಿಡುಗಡೆ ಕಾರ್ಯಕ್ರಮದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ 1950ಕ್ಕಿಂತ ಮೊದಲು ಎರಡೂ ಪ್ರತ್ಯೇಕ ಘಟಕಗಳಾಗಿ ಸೇವೆ ಸಲ್ಲಿಸುತ್ತಿದ್ದವು. 1950ರ ನ. 7 ರಂದು ಎರಡೂ ಘಟಕಗಳು ವಿಲೀನಗೊಳ್ಳುವುದರ ಮೂಲಕ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಏಕೀಕರಣವಾಯಿತು. ನಾನು, ನನ್ನದು ಎನ್ನುವುದಕ್ಕಿಂತ ನಾವು ನಮ್ಮದು ಎಂಬ ಹೃದಯ ವೈಶಾಲ್ಯತೆಯನ್ನು ಬೆಳೆಸುವುದೇ ಸ್ಕೌಟ್ಸ್ ಮತ್ತು ಗೈಡ್ಸ್ ಉದ್ದೇಶ. ಇಲ್ಲಿ ಶಿಕ್ಷಣದ ಜೊತೆಗೆ ಜೀವನ ಕೌಶಲಗಳ ಬೆಳವಣಿಗೆಯೂ ಆಗುತ್ತದೆ ಎಂದರು.

ತಾಲ್ಲೂಕು ಶಿಕ್ಷಣ ಇಲಾಖೆ ಕ್ಷೇತ್ರ ಸಮನ್ವಯಾಧಿಕಾರಿ ಆರ್. ವಿಜಯಕುಮಾರ್ ಮಾತನಾಡಿ, ಸ್ಕೌಟ್ಸ್ ಮತ್ತು ಗೈಡ್ಸ್ ಸಾಮಾಜಿಕ ಮೌಲ್ಯಗಳನ್ನು ಬಿತ್ತುತ್ತಾ ಸಮಾಜಮುಖಿಯಾಗಿ ವಿಕಸನಗೊಳ್ಳಲು ಬಹುದೊಡ್ಡ ಪಾತ್ರ ವಹಿಸುತ್ತದೆ. ಹಾಸನದಲ್ಲಿ ಭಾರತ್ ಸ್ಕೌಟ್ಸ್-ಗೈಡ್ಸ್ ಎಂದಾಕ್ಷಣ ಹಾಸನಾಂಬ ಜಾತ್ರೆಯಲ್ಲಿ ಮಕ್ಕಳು ಮಾಡಿದ ನಿಸ್ವಾರ್ಥ ಸೇವೆ ನೆನಪಿಗೆ ಬರುತ್ತದೆ. ಇದು ಅಂತರಾಷ್ಟ್ರೀಯ ಮಟ್ಟದ ಸಂಘಟನೆಯಾಗಿರುವುದರಿಂದ ರಾಜ್ಯ, ದೇಶ, ವಿದೇಶಗಳಲ್ಲಿ ಸಮುದಾಯದ ಸೇವೆಯನ್ನು ಪ್ರಮುಖವಾಗಿ ಗುರಿಯಾಗಿಸಿಕೊಂಡು ಮಕ್ಕಳ ಸರ್ವಾಂಗೀಣ ವಿಕಸನಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

# ಹಿಂದುಳಿದ ವರ್ಗದವರು ಸರ್ಕಾರದ ಸವಲತ್ತು ಪಡೆಯಿರಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ನಿಗಮಗಳನ್ನು ಸ್ಥಾಪಿಸುವ ಮೂಲಕ ಹತ್ತಾರು ವಿಶೇಷ ಯೋಜನೆಗಳನ್ನು ಅನುಷ್ಠಾನಪಡಿಸಿದ್ದು, ಸವಲತ್ತು ಹೊಂದಲು ಅರ್ಹರು ಮುಂದಾಗಬೇಕು ಎಂದು ವಿಶ್ವಕರ್ಮ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ಸುಜ್ಞಾನಮೂರ್ತಿ ತಿಳಿಸಿದರು.

ಪಟ್ಟಣದ ಶ್ರೀ ಕಾಳಿಕಾಂಬ ದೇವಾಲಯದಲ್ಲಿ ಸಮುದಾಯವರೊಂದಿಗೆ ಸಭೆ ನಡೆಸಿದ ಅವರು, ಸಮುದಾಯ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನಿಗಮ ಒತ್ತು ನೀಡಿದೆ. ಕಾರ್ಮಿಕರ ಮಕ್ಕಳು ಉನ್ನತ ವ್ಯಾಸಂಗ ನಡೆಸಲು 3 ಲಕ್ಷ ರೂ. ವರೆಗಿನ ಸಹಾಯಧನ ನೀಡುತ್ತದೆ. 4 ವರ್ಷದ ಕೋರ್ಸ್‌ಗಳಿಗೆ ಹೆಚ್ಚಿನ ಹಣ ನೀಡಲಾಗುತ್ತಿದೆ. ಅನಾರೋಗ್ಯ, ಮದುವೆ ಹಾಗೂ ಕೆಲಸ ಪರಿಕರಗಳನ್ನು ವಿತರಿಸುವ ಹತ್ತಾರು ಯೋಜನೆಗಳು ಇವೆ. ಸವಲತ್ತುಗಳನ್ನು ಅರ್ಹ ಫಲಾನುಭವಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಈ ಮೂಲಕ ಜನಾಂಗ ಅಭಿವೃದ್ಧಿಯಾಗಬೇಕಿದೆ ಎಂದರು.

ತಾಲೂಕು ಅಧ್ಯಕ್ಷ ಗಂಗಾಧರಾಚಾರ್ ಮಾತನಾಡಿ, ವಿಶ್ವಕರ್ಮ ಜನಾಂಗದವರು ಕೆಲಸದಲ್ಲಿ ನೈಪುಣ್ಯತೆ ಹೊಂದಿರುವವರಿದ್ದಾರೆ. ಜಾಗತೀಕರಣದ ಪ್ರಭಾವ ಎಲ್ಲವೂ ಯಾಂತೀಕೃತವಾಗಿದೆ. ಹೀಗಾಗಿ ಸಮಯ, ವೆಚ್ಚವೂ ಕಡಿಮೆಯಾಗುತ್ತಿದೆ. ಕರಕುಶಲ ಕರ್ಮಿಗಳಿಗೆ ಬೇಡಿಕೆ ಇದ್ದೇ ಇದ್ದರೂ, ಅವಕಾಶ ಕಡಿಮೆಯಾಗಿದೆ. ಕುಶಲಕರ್ಮಿಗಳು ಇದರಿಂದ ಮಕ್ಕಳನ್ನು ಪಾರಂಪರಿಕ ಉದ್ಯೋಗ ಮುಂದುವರೆಸಲು ಇಚ್ಛಾಸಕ್ತಿ ತೋರುತ್ತಿಲ್ಲ. ಇಂತಹದ್ದೇ ಹಲವು ಸಮಸ್ಯೆಗಳು ಸಮೂದಾಯವನ್ನು ಕಾಡುತ್ತಿದೆ. ಇವುಗಳಿಗೆ ಸರಕಾರದ ಹಂತದಲ್ಲಿ ಚರ್ಚಿಸಿ ಪರಿಹಾರ ರೂಪಿಸಿಕೊಡಿ ಎಂದು ಕೋರಿದರು.

ಕಾರ್ಯದರ್ಶಿ ರೇವಣ್ಣಾಚಾರ್, ನಿವೃತ್ತ ನೌಕರ ಮಂಜುನಾಥ್, ಮುಖಂಡ ಸೋಮಣ್ಣ, ಸುಬ್ರಹ್ಮಣ್ಯ, ಅರ್ಚಕ ಮಲ್ಲೇಶ್ ಉಪಸ್ಥಿತರಿದ್ದರು.

# ಓಲಾ, ರ್‍ಯಾಪಿಡೋ ವಿರುದ್ಧ ಆಟೋ ಚಾಲಕರ ಪ್ರತಿಭಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಓಲಾ, ಊಬರ್, ರಾಪಿಡೋ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಆಟೋ ಚಾಲಕರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಆಟೋ ಚಾಲಕರ ಮಜ್ದೂರ್ ಸಂಘದ ಉಪಾಧ್ಯಕ್ಷ ಹೆಚ್.ಕೆ.ದಿಲೀಪ್ ಮಾತನಾಡಿ, ಜಿಲ್ಲೆಯ ಸಾವಿರಾರು ಆಟೋ ಚಾಲಕರು ತಮ್ಮ ಕುಟುಂಬದ ಜೀವನೋಪಾಯವನ್ನು ಆಟೋ ಚಾಲನೆ ಮೂಲಕ ಮಾಡುತ್ತಿದ್ದಾರೆ. ಸರ್ಕಾರದಿಂದ ಯಾವುದೇ ಸೌಲಭ್ಯವಿಲ್ಲದೆ ದಿನನಿತ್ಯದ ಪ್ರಯಾಣಿಕರ ಭರವಸೆ ಮೇಲೆ ಬದುಕು ನಡೆಸುತ್ತಿರುವ ಈ ವರ್ಗ, ಈಗ ಖಾಸಗಿ ಅಗ್ರಿಗೇಟರ್ ಕಂಪನಿಗಳ ದೌರ್ಜನ್ಯದಿಂದ ನಲುಗಿದೆ ಎಂದು ಹೇಳಿದರು.

ನಾವು ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರಿದ್ದೇವೆ. ಸರ್ಕಾರಿ ಅಥವಾ




ಖಾಸಗಿ ಉದ್ಯೋಗ ಸಿಕ್ಕಿಲ್ಲದ ಕಾರಣದಿಂದ ಜೀವನೋಪಾಯಕ್ಕಾಗಿ ಆಟೋ ಚಾಲನೆ ಆರಂಭಿಸಿದ್ದೇವೆ. ಆದರೆ, ಈಗ ಓಲಾ, ಊಬರ್, ರಾಪಿಡೋ ಮುಂತಾದ ಆ್ಯಪ್ ಕಂಪನಿಗಳು ನಮ್ಮ ದುಡಿಮೆಗೆ ಕುತ್ತು ತಂದಿವೆ ಎಂದು ಆತಂಕ ವ್ಯಕ್ತಪಡಿಸಿದರು. ಆ್ಯಪ್ ಕಂಪನಿಗಳ ಅಕ್ರಮ ಸೇವೆಯಿಂದ ಆದಾಯ ಕುಸಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಅಗ್ರಿಗೇಟರ್ ಕಂಪನಿಗಳು ಆನ್‌ಲೈನ್ ಆ್ಯಪ್ ಮೂಲಕ ಆಟೋ ಹಾಗೂ ಬೈಕ್ ಟ್ಯಾಕ್ಸಿ ಸೇವೆಗಳನ್ನು ನಡೆಸುತ್ತಿದ್ದು, ಇದರಿಂದ ಸ್ಥಳೀಯ ಆಟೋ ಚಾಲಕರ ಆದಾಯ ಭಾರೀ ಪ್ರಮಾಣದಲ್ಲಿ ಕುಸಿದಿದೆ ಎಂದು ತಿಳಿಸಿದರು.

ಪ್ರತಿದಿನದ ಇಂಧನ ಖರ್ಚು, ವಾಹನ ಸಾಲದ ಬಾಧೆ, ಮಕ್ಕಳ ಶಿಕ್ಷಣ ವೆಚ್ಚ ಇವೆಲ್ಲವನ್ನು ಪೂರೈಸಲು ಆಗದೇ, ಅನೇಕ ಚಾಲಕರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೈಕೋರ್ಟ್ ಹಾಗೂ ರಾಜ್ಯ ಸರ್ಕಾರ ಈ ರೀತಿಯ ಖಾಸಗಿ ಸಂಸ್ಥೆಗಳ ಸೇವೆ ನಿಷೇಧಿಸುವಂತೆ ಆದೇಶ ನೀಡಿದ್ದರೂ ಸಹ, ಓಲಾ, ಊಬರ್, ರಾಪಿಡೋ ಮುಂತಾದ ಕಂಪನಿಗಳು ಮಧ್ಯವರ್ತಿಗಳಂತೆ ಕಾರ್ಯನಿರ್ವಹಿಸುತ್ತಿವೆ. ಚಾಲಕರಿಗೆ ಹಣದ ಆಮಿಷ ತೋರಿಸಿ ಆ್ಯಪ್ ಡೌನ್‌ಲೋಡ್ ಮಾಡಿಸಿ ಸಾರ್ವಜನಿಕರ ನಡುವೆ ವೈಮನಸ್ಸು ಉಂಟುಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಈ ವಿಷಯವಾಗಿ ಹಿಂದೆಯೂ ಎರಡು ಬಾರಿ ಜಿಲ್ಲಾಡಳಿತಕ್ಕೆ ಹಾಗು ಸಾರಿಗೆ ಇಲಾಖೆಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಆಗಿಲ್ಲ. ಇನ್ನಾದರೂ ಈ ವಿಷಯ ಗಂಭೀರವಾಗಿ ಪರಿಗಣಿಸಿ, ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಆ್ಯಪ್ ಕಂಪನಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಉಂಟಾಗಬಹುದು ಎಂದು ಆಗ್ರಹಿಸಿದರು.

ಸರ್ಕಾರ ಮತ್ತು ಜಿಲ್ಲಾಡಳಿತ ನಮ್ಮ ಕಷ್ಟ ಅರ್ಥಮಾಡಿಕೊಂಡು ಸ್ಥಳೀಯ ಆಟೋ ಚಾಲಕರ ಹಕ್ಕು ಹಾಗು ಗೌರವ ಕಾಪಾಡಬೇಕು ಎಂದು ಮನವಿ ಮಾಡಿದರು. ಇದೇ ವೇಳೆ ಪ್ರತಿಭಟನೆಗೆ ಬಾರದೆ ಓಡುತ್ತಿದ್ದ ಆಟೋಗಳನ್ನು ಪ್ರತಿಭಟನಾಕಾರರು ತಡೆದಾಗ ಸಣ್ಣ ಗೊಂದಲ ಉಂಟಾಯಿತು. ಕೂಡಲೇ ಪೊಲೀಸರು ಮಧ್ಯೆ ಪ್ರವೇಶಿಸಿ ಸಮಾಧಾನ ಮಾಡಿದರು.

ಸಂಘದ ಜಿಲ್ಲಾಧ್ಯಕ್ಷ ಜಾನ್, ಉಪಾಧ್ಯಕ್ಷ ಎನ್.ಕುಮಾರ್, ಎಂ.ಆನಂದ್, ಪ್ರಧಾನ ಕಾರ್ಯದರ್ಶಿ ಎಂ.ಸಿ.ಯಶ್ವಂತ್, ಕಾರ್ಯದರ್ಶಿ ರಮೇಶ್, ಸಹ ಕಾರ್ಯದರ್ಶಿ ಪವನ್, ಶಾಖಾ ಪದಾಧಿಕಾರಿ ರವಿ, ಸಂಚಸಲಕ ಹರೀಶ್, ಸಹ ಸಂಚಾಲಕ ಮಂಜು, ನಿರ್ದೇಶಕ ಹೆಚ್.ಕೆ.ಪ್ರದೀಪ್, ಖಜಾಂಚಿ ಕೆ.ಆರ್.ಶಮಂತ್, ಮೋಹನ್ ಕುಮಾರ್ ಇತರಿದ್ದರು.

# ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಲು ಮನವಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮೆಕ್ಕೆಜೋಳ ಖರೀದಿ ಕೇಂದ್ರವನ್ನು ಶೀಘ್ರ ತೆರೆಯಬೇಕು ಎಂದು ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ಬೇಲೂರು ತಾಲ್ಲೂಕು ಘಟಕದ ಪದಾಧಿಕಾರಿಗಳು ಸೋಮವಾರ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿ ಕ್ವಿಂಟಾಲ್‌ಗೆ 2400 ರೂ.ನಂತೆ ಮೆಕ್ಕೆ ಜೋಳ ಖರೀದಿಗೆ ಸರ್ಕಾರ ಆದೇಶಿಸಿದೆ. ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ 1700 ರಿಂದ 1800 ರೂ. ನಂತೆ ಖರೀದಿಸಲಾಗುತ್ತಿದೆ. ಬಿಳಿ ಸುಳಿ ರೋಗ ತಗುಲಿದ ಪರಿಣಾಮ ಉತ್ತಮ ಇಳುವರಿ ಬಂದಿಲ್ಲ. ಇಳುವರಿ ನಷ್ಟದಿಂದ ಅನ್ನದಾತರು ಕಂಗಾಲಾಗಿದ್ದು ಅಧಿಕಾರಿಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರು ಹಾಗು ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರ ಖರೀದಿ ಕೇಂದ್ರ ತೆರೆದು ಅನುಕೂಲ ಮಾಡಿಕೊಡಬೇಕು ಎಂದು ಮನವಿ ಸಲ್ಲಿಸಿದರು.

# ಹಾಸನದಲ್ಲಿ ನ.13 ರಿಂದ ಮೂರು ದಿನ ರಾಜ್ಯ ಸಮ್ಮೇಳನ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ದುಡಿಯುವ ಜನರ ಮುಂಚೂಣಿಯ ಸಂಘಟನೆಯಾದ ಸಿಐಟಿಯುನ 16ನೇ ರಾಜ್ಯ ಮಟ್ಟದ ಸಮ್ಮೇಳನ ನ. 13 ರಿಂದ 15ರ ವರೆಗೆ ಹಾಸನದಲ್ಲಿ ನಡೆಯಲಿದೆ ಎಂದು ಸಂಘಟನೆಯ ಜಿಲ್ಲಾ ಮುಖಂಡ ಲಿಂಗರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನದ ಅಂಬೇಡ್ಕರ್ ಭವನದಲ್ಲಿ ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ಕಾರ್ಮಿಕರ ಸಮಸ್ಯೆಗಳ ಕುರಿತಾದ ಹಲವು ವಿಷಯಗಳು ಚರ್ಚಿತವಾಗಲಿದೆ. ಮಾಸಿಕ 36 ಸಾವಿರ ರೂ. ಕನಿಷ್ಟ ವೇತನ, 10 ಸಾವಿರ ರೂ. ಪಿಂಚಣಿ, ಉದ್ಯೋಗ ಹಾಗೂ ಸಾಮಾಜಿಕ ಭದ್ರತೆಗಾಗಿ ಒತ್ತಾಯ, ಕರಾಳ ಕಾರ್ಮಿಕ ಸಂಹಿತೆಗಳಿಗೆ ವಿರೋಧ, ಸಮೃದ್ಧ ಹಾಗೂ ಸೌಹಾರ್ದ ಕರ್ನಾಟಕ ನಿರ್ಮಾಣದ ಉದ್ದೇಶದಿಂದ ಸಮ್ಮೇಳನ ಆಯೋಜಿಸಲಾಗಿದೆ ಎಂದರು.

ಜಿಲ್ಲೆ 8 ತಾಲ್ಲೂಕುಗಳಲ್ಲಿ ಸಿಐಟಿಯು ಸಂಘಟನೆ ಇದ್ದು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ನಿರಂತರವಾಗಿ ಕೆಲಸ ಮಾಡಲಾಗುತ್ತಿದೆ. ಅಂಗನವಾಡಿ, ಗ್ರಾಮ ಪಂಚಾಯಿತಿ, ಬಿಸಿಯೂಟ, ಹಾಸ್ಟೆಲ್ ನೌಕರರು, ಪ್ಲಾಂಟೇಷನ್, ಗುತ್ತಿಗೆ, ಹೊರಗುತ್ತಿಗೆ ನೌಕರರು ಸೇರಿದಂತೆ ವಿವಿಧ ಕಾರ್ಮಿಕರ ಸಂಘಗಳನ್ನು ರಚಿಸಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸಲಾಗುತ್ತಿದೆ. ನವ ಉದಾರವಾದಿ ನೀತಿಗಳನ್ನು ತೀವ್ರವಾಗಿ ಜಾರಿಗೊಳಿಸುವ ಮೂಲಕ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದ್ದು ಈ ಎಲ್ಲ ಸಮಸ್ಯೆಗಳ ಕುರಿತು ಸಮ್ಮೇಳನದಲ್ಲಿ ಚರ್ಚಿಸಿ ನಿರ್ಣಯಗಳನ್ನು ಅಂಗೀಕರಿಸಲಾಗುವುದು. ಸಮ್ಮೇಳನಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳಿಂದ 450 ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ. ಸಮ್ಮೇಳನದ ಕೊನೆಯ ದಿನವಾದ ನ.15 ಶನಿವಾರ 10 ಸಾವಿರ ಕಾರ್ಮಿಕರಿಂದ ಬೃಹತ್ ಮೆರವಣಿಗೆ ನಡೆಯಲಿದೆ. ಒಂದು ಸಾವಿರ ಕೆಂಪು ಸಮವಸ್ತ್ರ ಧಾರಿಗಳಿಂದ ಪಥಸಂಚಲನ ನಡೆಯಲಿದೆ. ತಾಲೂಕಿನ ಎಲ್ಲ ಕಾರ್ಮಿಕ ವರ್ಗದವರು ಸಮ್ಮೇಳನದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಅಶೋಕ್ ಅತ್ನಿ, ತಾಲ್ಲೂಕು ಅಧ್ಯಕ್ಷ ಜಿ.ಆರ್. ಚಂದ್ರು, ಮುಖಂಡರಾದ ಗೀತಾ, ಕೆ.ಎಸ್. ಮಂಜುನಾಥ್, ಸುಬ್ರಹ್ಮಣ್ಯ ಗೋಷ್ಠಿಯಲ್ಲಿದ್ದರು.

# ಗೃಹಿಣಿ ಸಾವಿನ ಸುತ್ತ ಅನುಮಾನದ ಹುತ್ತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ತಾಲ್ಲೂಕಿನ ತಟ್ಟೆಕೆರೆ ಗ್ರಾಮದಲ್ಲಿ ಮಹಿಳೆಯೊಬ್ಬರ ಶವ ಪತ್ತೆಯಾಗಿದ್ದು ಆತ್ಮಹತ್ಯೆಯೋ ಕೊಲೆಯೋ ಎಂಬ ಸಂಶಯ ಮೂಡಿದೆ.

ತಾಲ್ಲೂಕಿನ ತಟ್ಟೆಕೆರೆ ಬಾರೆಯ ಸೀತಮ್ಮ ಎಂಬುವವರ ಮೊಮ್ಮಗಳು ಸುಷ್ಮಿತಾ (26) ಮೃತ ದುರ್ದೈವಿ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದ ಸುಷ್ಮಿತಾ, ತಾಯಿ ಸುಮಿತ್ರಾ ಜೊತೆಗೆ ಅಜ್ಜಿ ಮನೆಯಲ್ಲೇ ವಾಸವಿದ್ದಳು. ಐದು ವರ್ಷಗಳ ಹಿಂದೆ ಚನ್ನರಾಯಪಟ್ಟಣ ತಾಲ್ಲೂಕು ಗೂಳಮಾರನಹಳ್ಳಿ ಗ್ರಾಮದ ರಾಜು ಎಂಬಾತನ ಜೊತೆಗೆ ವಿವಾಹ ಮಾಡಿಕೊಡಲಾಗಿತ್ತು.

ಕಳೆದ ಎರಡು ವರ್ಷಗಳಿಂದ ಸುಷ್ಮಿತಾ ಆರೋಗ್ಯದಲ್ಲಿ ವಿಪರೀತ ಏರುಪೇರು ಉಂಟಾಗಿತ್ತು. ಬುದ್ದಿ ಹೀನರಾಗಿದ್ದ ಸುಷ್ಮಿತಾ ಮೂರ್ಛೆ ರೋಗದಿಂದ ಬಳಲುತ್ತಿದ್ದರು. ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ನಿತ್ಯ ಮಾತ್ರೆ ಸೇವಿಸುತ್ತಿದ್ದರು. ಆಸ್ಪತ್ರೆ ಖರ್ಚು ಭರಿಸುವ ವಿಚಾರದಲ್ಲಿ ರಾಜು ಮತ್ತು ಸುಷ್ಮಿತಾ ನಡುವೆ ಗಲಾಟೆ ನಡೆಯುತ್ತಿತ್ತು. ಅದರಿಂದ ಮನಸ್ತಾಪಗೊಂಡಿದ್ದ ಮಹಿಳೆ ತಮ್ಮ ಮೂವರು ಮಕ್ಕಳನ್ನು ಅಜ್ಜಿ ಊರಾದ ತಟ್ಟೆಕೆರೆಗೆ ಬಿಟ್ಟು ಬಂದಿದ್ದರು. ಕೌಟುಂಬಿಕ ಕಲಹದಿಂದ ಸುಷ್ಮಿತಾ ಬೇಸರಗೊಂಡಿದ್ದರೆನ್ನಲಾಗಿದೆ.

ಗಂಡನ ಜೊತೆ ಜಗಳ ಮಾಡಿಕೊಂಡಿದ್ದ ಸುಷ್ಮಿತಾ ನ. 9ರಂದು ತಟ್ಟೆಕೆರೆಯ ಅಜ್ಜಿ ಮನೆಗೆ ತೆರಳಿ ತನ್ನ ಕಿವಿಯೊಲೆಗಳನ್ನು ಕೊಡುವಂತೆ ಕೇಳಿದ್ದರು. ನಿನ್ನ ಮಕ್ಕಳನ್ನು ಸಾಕುವುದಕ್ಕಾಗಿ ಓಲೆ ಮಾರಿದ್ದೇನೆಂದು ಅಜ್ಜಿ ಸೀತಮ್ಮ ಹೇಳಿದ್ದರು. ಅದರಿಂದ ಆಕ್ರೋಶಗೊಂಡ ಸುಷ್ಮಿತಾ ಕೋಪದಲ್ಲಿ ವಾಪಾಸ್ಸಾಗಿದ್ದಳು. ಆದರೆ ಮಂಗಳವಾರ ಬೆಳಿಗ್ಗೆ ಅಜ್ಜಿ ಮನೆಯ ಬಚ್ಚಲು ಕೋಣೆಯಲ್ಲಿ ಸುಷ್ಮಿತಾ ಮೃತದೇಹ ಪತ್ತೆಯಾಗಿರುವುದು ಆತಂಕ ಹುಟ್ಟಿಸಿದೆ. ಕೆನ್ನೆ, ಎಡಗೈ ಮತ್ತು ತುಟಿ ಮೇಲೆ ಗಾಯದ ಗುರುತುಗಳಿದ್ದು ಪ್ರಕರಣ ಗೊಂದಲ ಮೂಡಿಸಿದೆ. ದೂರು ದಾಖಲಿಸಿಕೊಂಡಿರುವ ಗ್ರಾಮಾಂತರ ಠಾಣೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

# ಸಿಡಿದು ಅಬ್ಬರಿಸಿದ ರಸಗೊಬ್ಬರ!



- ನಾಗೇಶ್ ಹೆಗಡೆ

ದಿಲ್ಲಿಯ ಕೆಂಪುಕೋಟೆಯ ಬಳಿಯ ಸ್ಫೋಟದ ಸಂಬಂಧ ಮೂವರು ಡಾಕ್ಟರ್‌ಗಳನ್ನು ಬಂಧಿಸಲಾಗಿದೆ. ಸ್ಫೋಟಕ್ಕೆ ಅಮೋನಿಯಂ ನೈಟ್ರೇಟ್ ಎಂಬ ರಸಗೊಬ್ಬರದ ಬಿಳಿಪುಡಿ ಕಾರಣವೆಂದು ಹೇಳಲಾಗುತ್ತದೆ. ಸ್ಫೋಟಕ ಗುಣವಿರುವ ಈ ಬಿಳಿಪುಡಿಯೇ ಆಸ್ಪತ್ರೆಗಳಲ್ಲಿ, ಅಂಬುಲೆನ್ಸ್‌ಗಳಲ್ಲಿ ಮತ್ತು ಪ್ರಥಮ ಸಹಾಯದ ಪೆಟ್ಟಿಗೆಯಲ್ಲೂ ಇರುತ್ತದೆ ಗೊತ್ತೆ?

ಬೆಂಗಳೂರಿನ ಮಲ್ಲೇಶ್ವರದ ಬಿಜೆಪಿ ಪಕ್ಷದ ಕಚೇರಿಯ ಎದುರು 2013ರ ಏ. 17ರಂದು ಬೈಕ್‌ನಲ್ಲಿ ಇಟ್ಟಿದ್ದ ಆಮೋನಿಯಂ ನೈಟ್ರೇಟ್ ಎಂಬ ಸಿಡಿಮದ್ದು ಸಿಡಿಯಿತು. ಹದಿನಾರು ಜನರು ಗಾಯಗೊಂಡರು.

ಅದೇ ದಿನ, ಏಪ್ರಿಲ್ 17ರಂದೇ ಹದಿನೈದು ಸಾವಿರ ಕಿಲೋ ಮೀಟರ್ ಆಚೆ ಅಮೆರಿಕದ ಟೆಕ್ಸಾಸ್‌ನಲ್ಲಿ ಆಮೋನಿಯಂ ನೈಟ್ರೇಟನ್ನು ಉತ್ಪಾದಿಸುತ್ತಿದ್ದ ರಸಗೊಬ್ಬರ ಫ್ಯಾಕ್ಟರಿಯೊಂದು ಸ್ಫೋಟಗೊಂಡಿತು. ಬೆಂಕಿ ಆರಿಸಲು ಹೋದ ಹದಿನಾರು ಜನರು ಸತ್ತರು. ಇನ್ನೂರಕ್ಕೂ ಹೆಚ್ಚು ಮಂದಿಗೆ ಗಾಯಗಳಾದವು. ಸುಮಾರು 80 ಮನೆಗಳು ಧ್ವಂಸವಾದವು.

ಕಾಕತಾಳೀಯ ಇನ್ನೂ ಇದೆ: ಇಂಥದ್ದೇ ಆಮೋನಿಯಂ ನೈಟ್ರೇಟ್ ಪುಡಿಯನ್ನು ತುಂಬಿಕೊಂಡಿದ್ದ ಹಡಗೊಂದು ಇದೇ ಟೆಕ್ಸಾಸ್‌ನಲ್ಲಿ 66 ವರ್ಷಗಳ ಹಿಂದೆ ಇದೇ ಏಪ್ರಿಲ್ 16ರಂದು ಸ್ಫೋಟಗೊಂಡಿತ್ತು.

1947ರ ಆ ದುರಂತ ಅಮೆರಿಕದ ಅತ್ಯಂತ ಘೋರ ಔದ್ಯಮಿಕ ದುರಂತವೆನಿಸಿದೆ. ಫ್ರಾನ್ಸ್ ನಿಂದ ಬಂದ ಹಡಗಿಗೆ ಆಗಷ್ಟೇ 2300 ಟನ್ ನೈಟ್ರೇಟ್ ಪುಡಿಯಿದ್ದ ಚೀಲಗಳನ್ನು ಹೇರಲಾಗಿತ್ತು. ಸ್ಫೋಟ ಎಷ್ಟು ಭೀಕರವಾಗಿತ್ತೆಂದರೆ ಆಕಾಶದಲ್ಲಿದ್ದ ಎರಡು ವಿಮಾನಗಳು ನೆಗೆದು ಬಿದ್ದವು. ಬಂದರಿನಲ್ಲಿದ್ದ ಪೆಟ್ರೊ ಕೆಮಿಕಲ್ ಸ್ಥಾವರಗಳು, ತೈಲದ ತೊಟ್ಟಿಗಳು ಕಿಚ್ಚೆದ್ದು ಸಾವಿರಕ್ಕೂ ಹೆಚ್ಚು ಮನೆಗಳು ಕುಸಿದು 581 ಜನರು ಅಸು ನೀಗಿದರು. ಎಲ್ಲ ಅಗ್ನಿಶಾಮಕಗಳು ಧ್ವಂಸಗೊಂಡವು. ಸ್ಫೋಟಿಸಿದ ಹಡಗಿನ ಸಮೀಪ ಅದೇ ಆ ನೈಟ್ರೇಟನ್ನು ಹೊತ್ತು ನಿಂತಿದ್ದ ಇನ್ನೊಂದು ಹಡಗು ಹದಿನಾರು ಗಂಟೆಗಳ ನಂತರ ಸ್ಫೋಟಿಸಿತು. ಮಸಣಮೌನದ ನಡುವೆ ಈ ಎರಡನೆಯ ಸ್ಫೋಟದ ಸಂದರ್ಭದಲ್ಲಿ ಯಾರೂ ಯಾರ ನೆರವಿಗೂ ಧಾವಿಸುವಂತಿರಲಿಲ್ಲ.

ಹೊಲ-ಗದ್ದೆಗಳಲ್ಲಿ ಎರಚುವ ಯೂರಿಯಾ ಪುಡಿಯ ಹಾಗೇ ಈ ಆಮೋನಿಯಂ ನೈಟ್ರೇಟ್ ಕೂಡ ಬಿಳಿಪುಡಿ. ಯೂರಿಯಾದ ಹಾಗೇ ಚೀಲದಲ್ಲಿ ಇಟ್ಟರೆ ಇದೂ ತೇವವನ್ನು ಹೀರಿಕೊಂಡು ಗಟ್ಟಿ ಮುದ್ದೆ ಆಗುತ್ತದೆ. ನೀರಿನ ಸ್ಪರ್ಶದಿಂದ ತಂಪಾಗುತ್ತದೆ. ಬೆಂಕಿಯ ಅಥವಾ ಕೇವಲ ಕಿಡಿಯ ಸ್ಪರ್ಶದಿಂದ ಸ್ಫೋಟಗೊಳ್ಳುತ್ತದೆ. ಕೆಲವು ದೇಶಗಳಲ್ಲಿ ರೈತರು ಇದನ್ನು ರಸಗೊಬ್ಬರಕ್ಕಿಂತ ಇಂಗು ಗುಂಡಿ ತೋಡಲು ಡೈನಮೈಟ್‌ನಂತೆ ಬಳಸುತ್ತಾರೆ.

ಇಲ್ಲಿ ಜೋಡಿಸಿದ ಚಿತ್ರ ಲೆಬನಾನ್ ರಾಜಧಾನಿ ಬೀರೂಟ್‌ನಲ್ಲಿ 2020ರ ಆಗಸ್ಟ್ 12ರಂದು ಸಂಭವಿಸಿದ ಸ್ಫೋಟದ್ದು. ಬಂದರುಕಟ್ಟೆಯ ಬಳಿಯ ಗೋದಾಮಿನಲ್ಲಿ ಇಟ್ಟ ಅಮೋನಿಯಂ ನೈಟ್ರೇಟ್ ಸಿಡಿದು 220 ಜನರು ಸತ್ತು, ಅಂದಾಜು 7000 ಜನರು ಗಾಯಗೊಂಡರು.

ಲಕ್ಷಾಂತರ ಜನರನ್ನು ಆಸ್ಪತ್ರೆಗಳಿಗೆ ಅಟ್ಟಿದ ಆಮೋನಿಯಂ ನೈಟ್ರೇಟ್ ಪುಡಿ ಬೇರೊಂದು ಕಾರಣಕ್ಕಾಗಿ ತಾನೇ ಆಸ್ಪತ್ರೆಗೆ ಹೋಗಿ ಕೂತಿರುತ್ತದೆ. ಗಾಯ, ಉಳುಕು, ಊತಗಳಿಗೆ ತಕ್ಷಣ ತಂಪು ನೀಡಬೇಕೆಂದರೆ ಐಸ್‌ಪ್ಯಾಕ್ ಬಳಸುತ್ತಾರೆ ತಾನೆ? ನಮ್ಮ ಆಸ್ಪತ್ರೆಗಳಲ್ಲಿ ಕರೆಂಟ್ ಇರುವುದಿಲ್ಲ, ಇದ್ದರೂ ಫ್ರಿಜ್ ಕೆಟ್ಟಿರುವಾಗ ಐಸ್ ಸಿಗುವುದಿಲ್ಲ. ಅಂಥ ಸಂದರ್ಭದಲ್ಲಿ ಆಮೋನಿಯಂ ನೈಟ್ರೇಟ್ ಪುಡಿಗೆ ನೀರು ಸೇರಿಸಿದರೆ ಬರ್ಫದಷ್ಟು ತಂಪಾಗುತ್ತದೆ. ಪ್ರಥಮ ಶುಶ್ರೂಷೆಯ ಪೆಟ್ಟಿಗೆಗಳಲ್ಲಿ ಅದು ರೆಡಿಮೇಡ್ ರೂಪದಲ್ಲೂ ಸಿಗುತ್ತದೆ.

# ಇತಿಹಾಸದಲ್ಲಿ ಈ ದಿನ

## ನವೆಂಬರ್-12

1918: ಆಸ್ಟ್ರಿಯಾ ಗಣರಾಜ್ಯವಾಗಿ ಘೋಷಿಸಲಾಯಿತು.

1927: ಮಹಾತ್ಮ ಗಾಂಧೀಜಿ ನವರೋಜಿ ಸ್ಮಾರಕ ಭಾಷಣ ನೀಡಿದರು.

1948: ಟೋಕಿಯೋ ಯುದ್ಧ ಅಪರಾಧ ನ್ಯಾಯಾಲಯವು 25 ಯುದ್ಧ ಅಪರಾಧಿಗಳಿಗೆ ಶಿಕ್ಷೆ ವಿಧಿಸಿತು.

1968: ಮಾಲ್ಡೀವ್ಸ್ ರಾಷ್ಟ್ರವು ತನ್ನ ಹೊಸ ಸಂವಿಧಾನ ಅಂಗೀಕರಿಸಿತು.

1980: ನಾಸಾ ಸಂಸ್ಥೆಯ ಀವಾಯೇಜ-೯1ಟ ನೌಕೆ ಶನಿಗ್ರಹದ ಅತ್ಯಂತ ಹತ್ತಿರದ ಬಿಂದುವನ್ನು ತಲುಪಿತು.

1996: ಇಥಿಯೋಪಿಯಾ ಮತ್ತು ಎರಿಟ್ರಿಯಾ ರಾಷ್ಟ್ರಗಳು ಶಾಂತಿ ಒಪ್ಪಂದಕ್ಕೆ ಸಹಿ ಮಾಡಿವೆ.

2014: ಭಾರತದ ಪ್ರಸಿದ್ಧ ಆರ್ಥಿಕ ತಜ್ಞ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತ ಪ್ರೊ. ಅಮರ್ತ್ಯ ಸೇನ್ ಅವರಿಗೆ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಀಭಾರತ ರತ್ನಟ ನೀಡಲಾಯಿತು.

### ಜನನ

1815: ಎಲಿಜಬೆತ್ ಕೆಡಿ ಸ್ಟಾಂಟನ್, ಅಮೆರಿಕದ ಮಹಿಳಾ ಹಕ್ಕು ಹೋರಾಟಗಾರ್ತಿ

1927: ಲಕ್ಷ್ಮೀಕಾಂತ್ ಶಾಂತಾರಾಮ್, ಕನ್ನಡ ಹಾಗೂ ಹಿಂದಿ ಚಿತ್ರನಟ

1942: ಅಮಿತಾಭ್ ಘೋಷ್, ಪ್ರಸಿದ್ಧ ಭಾರತೀಯ ಲೇಖಕ

### ಮರಣ

1944: ಮದನ್ ಮೋಹನ್ ಮಾಳವೀಯ, ಭಾರತೀಯ ಶಿಕ್ಷಣತಜ್ಞ ಹಾಗೂ ರಾಜಕಾರಣಿ

1999: ಅಮೃತಾ ಪ್ರೀತಂ, ಪ್ರಸಿದ್ಧ ಪಂಜಾಬಿ ಕವಯತ್ರಿ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248